## ಬಿಸಿಲ ದಿನಗಳಲ್ಲಿ ‘ಮೊಂಬತ್ತಿ’

ವಿದ್ಯುತ್ ಕಣ್ಣಾಮುಚ್ಚಾಲೆಯ ಧಗೆಯ ದಿನಗಳಲ್ಲಿ ನಿಧಾನಕ್ಕೆ ಸುದ್ದಿ ಮಾಡುತ್ತಿರುವ ಸಿನಿಮಾ ‘ಮೊಂಬತ್ತಿ’. ಶ್ರೀನಿವಾಸ್ ಕೌಶಿಕ್ ನಿರ್ದೇಶನದ ಈ ಸಿನಿಮಾ ಏಪ್ರಿಲ್ ತಿಂಗಳಲ್ಲಿ ಚಿತ್ರಮಂದಿರಗಳಿಗೆ ಬರುವ ಉತ್ಸಾಹದಲ್ಲಿದೆ. ನಿರ್ದೇಶನ ಮಾತ್ರವಲ್ಲ, ಚಿತ್ರಕಥೆ ಹಾಗೂ ಸಂಭಾಷಣೆಯೂ ಕೌಶಿಕ್ ಅವರದೇ. ತರುಣ ತರುಣಿಯರ ಮನಸುಗಳಲ್ಲಿ ತಮ್ಮ ‘ಮೊಂಬತ್ತಿ’ ಬೆಳಗಲಿದೆ ಎನ್ನುವ ವಿಶ್ವಾಸ ಅವರದು.

ಯುವ ಜನತೆಯನ್ನು ಸೆಳೆಯುವ ಸಿನಿಮಾ ಎಂದಮೇಲೆ ಪ್ರೇಮಕಥೆ ಇಲ್ಲದಿದ್ದರೆ ಹೇಗೆ? ಕೌಶಿಕ್‌ರ ಸಿನಿಮಾದಲ್ಲಿ ಆಕರ್ಷಕ ಪ್ರೇಮಕಥೆ ಇದೆಯಂತೆ. ಇದರ ಜೊತೆಗೆ – ಅಪರಾಧ ಜಗತ್ತಿನ ಚಿತ್ರಣವೂ ಸಾಹಸ ದೃಶ್ಯಗಳ ರೋಚಕತೆಯೂ ಹದವಾಗಿ ಚಿತ್ರಕಥೆಯಲ್ಲಿ ಬೆರೆತುಕೊಂಡಿದೆಯಂತೆ. ರವಿಕುಮಾರ್ ಹಾಗೂ ರಚನಾ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ನೀತು, ಯತಿರಾಜ್ ಹಾಗೂ ಬಿಗ್‌ಬಾಸ್ ಸಂಜನಾ ಅವರದು ತಾರಾಬಳಗದಲ್ಲಿ ಎದ್ದು ಕಾಣುವ ಹೆಸರುಗಳು.

‘ಬಿಗ್‌ಬಾಸ್’ ಖ್ಯಾತಿಯ ಸಂಜನಾ ಅವರು ಹಾಡೊಂದರಲ್ಲಿ ಕಾಣಿಸಿಕೊಂಡಿರುವುದು ಚಿತ್ರದ ವಿಶೇಷಗಳಲ್ಲೊಂದು. ಶ್ಯಾಮ ಸಿಂಧನೂರು ಛಾಯಾಗ್ರಹಣ ಹಾಗೂ ಸತೀಶ ಬಾಬು ಅವರ ಸಂಗೀತ ಚಿತ್ರಕ್ಕಿದೆ. ಚಿತ್ರದಲ್ಲಿ ನಾಲ್ಕು ಗೀತೆಗಳಿದ್ದು ಸದ್ಯದಲ್ಲೇ ಹಾಡುಗಳ ಧ್ವನಿಮುದ್ರಿಕೆ ಹೊರಬರಲಿದೆ.








## ‘ಪಟಾಕಿ’ ಹೊಡೆಯಲಿರುವ ಗಣೇಶ್!

ಗಣೇಶ್ ಅವರ ಪಾಲಿಗೆ 2017 ಅದೃಷ್ಟದ ವರ್ಷವಾಗುವ ಸಾಧ್ಯತೆಗಳಿವೆ. ಯೋಗರಾಜ ಭಟ್ ನಿರ್ದೇಶನದಲ್ಲಿ ‘ಮುಗುಳುನಗೆ’ ಚಿತ್ರದ ಚಿತ್ರೀಕರಣ ಒಂದೆಡೆ ನಡೆಯುತ್ತಿದೆ. ಇನ್ನೊಂದೆಡೆ ಅವರು ನಟಿಸಲಿರುವ ಹೊಸ ಚಿತ್ರಗಳು ಸೆಟ್ಟೇರುತ್ತಿವೆ. ‘ಮುಂಗಾರುಮಳೆ’ ಹಾಗೂ ‘ಗಾಳಿಪಟ’ ಚಿತ್ರಗಳ ನಂತರ ಭಟ್ಟರು ಹಾಗೂ ಗಣೇಶ್ ಒಟ್ಟಾಗಿ ನಟಿಸುತ್ತಿರುವ ಈ ಸಿನಿಮಾ ಗಾಂಧಿನಗರದ ನಿರೀಕ್ಷೆ ಕೆರಳಿಸಿದೆ.

‘ಮುಗುಳುನಗೆ’ ಚಿತ್ರೀಕರಣದ ನಡೆಯುವೆಯೇ ‘ಜೂಮ್’ ನಿರ್ದೇಶಕ ಪ್ರಶಾಂತ್ ರಾಜ್ ರೂಪಿಸುತ್ತಿರುವ ‘ಆರೆಂಜ್’ ಚಿತ್ರವನ್ನು ಗಣೇಶ್ ಒಪ್ಪಿಕೊಂಡಿದ್ದಾರೆ. ಇದರ ನಡುವೆ ಸಿಂಪಲ್ ಸುನಿ ನಿರ್ದೇಶನದ ಚಿತ್ರವೊಂದರಲ್ಲಿ ನಟಿಸಲು ಅವರು ಸಿದ್ಧತೆ ನಡೆಸುತ್ತಿದ್ದಾರೆ. ಇವೆಲ್ಲವೂ ಸೆಟ್ಟೇರಬೇಕಾದ ಚಿತ್ರಗಳಾದವು. ಈ ಸಿನಿಮಾ ಸುದ್ದಿಗಳ ನಡುವೆ ‘ಪಟಾಕಿ’ ಹೆಸರಿನ ಚಿತ್ರವೊಂದು ಸದ್ದಿಲ್ಲದೆ ಚಿತ್ರೀಕರಣ ಮುಗಿಸಿ ತೆರೆ ಕಾಣುವ ಸಿದ್ಧತೆ ನಡೆಸುತ್ತಿದೆ.

‘ಪಟಾಕಿ’ ಮಂಜು ಸ್ವರಾಜ್ ನಿರ್ದೇಶನದ ಸಿನಿಮಾ. ಮಂಜು ಸದಭಿರುಚಿಯ ಸಿನಿಮಾಗಳಿಗೆ ಹೆಸರಾದ ನಿರ್ದೇಶಕರು. ಈಗವರು ಗಣೇಶ್ ಜೊತೆ ವಿಭಿನ್ನ ಕಥೆಯ ಚಿತ್ರಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರಂತೆ. ಚಿತ್ರದ ಶೀರ್ಷಿಕೆಯಂತೆಯೇ ಗಣೇಶ್ ಅವರ ಪಾತ್ರವೂ ‘ಪಟಾಕಿ’ ಸ್ವರೂಪದ್ದಂತೆ. ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಅವರು ಕಾಣಿಸಿಕೊಂಡಿರುವುದು ಸಿನಿಮಾದ ವಿಶೇಷ. ‘ಮಾಣಿಕ್ಯ’ ಚಿತ್ರದಲ್ಲಿ ನಟಿಸಿದ್ದ ‘ರನ್ಯ’ ಈ ಚಿತ್ರದಲ್ಲಿ ಗಣೇಶ್‌ಗೆ ಜೋಡಿ.

ಎಸ್.ವಿ. ಬಾಬು ‘ಪಟಾಕಿ’ ಚಿತ್ರದ ನಿರ್ಮಾಪಕರು. ಸಾಯಿಕುಮಾರ್, ಪ್ರಿಯಾಂಕ, ಆಶಿಶ್ ವಿದ್ಯಾರ್ಥಿ ಹಾಗೂ ಸಾಧುಕೋಕಿಲ ತಾರಾಗಣದಲ್ಲಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ಹಾಗೂ ವೆಂಕಟೇಶ್ ಅಂಗುರಾಜ್ ಛಾಯಾಗ್ರಹಣವಿದೆ.

■ ರಘು